**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು**

**<u>ಸಿ.ಸಿ.ಸಂಖ್ಯೆ: 5922/2021</u>**

**ಫಿರ್ಯಾದಿ ಃ- ರಾಜ್ಯದ ಪರವಾಗಿ ಬಿಳಿಗೆರೆ ಪೋಲೀಸ್ ಠಾಣೆ,**

**ವಿರುದ್ಧ**

**ಆರೋಪಿ ಃ-** ಶಿವಲಿಂಗ , ಬಿನ್.ಮಹದೇವನಾಯಕ , **41** ವರ್ಷ, ತುಮ್ಮನೇರಳೆ ಗ್ರಾಮ, ನಂಜನಗೂಡು ತಾಲ್ಲೂಕು

**<u>ಆ ಪಾ ದ ನೆ</u>**

*ಶ್ರೀ ಕಿಶೋರ್ ಕುಮಾರ್ ಎಂ., 1 ನೇ ಹೆಚ್ಚುವರಿ* ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಿ.ಎ. ಎಲ್‌ಎಲ್.ಬಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆಃ-

ದಿಃ29.10.2021 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಬಿಳಿಗೆರೆ ಪೊಲೀಸ್ ಠಾಣಾ ಸರಹದ್ದಿನ ತಮ್ಮನೇರಳೆ ಗ್ರಾಮದ ಹತ್ತಿರ ಹರಿಯುವ ರಾಂಪುರ ನಾಲೆಯ ಬಳಿ ಇರುವ ಅರಳಿ ಮರದ ಬಳಿ ಆರೋಪಿತರಾದ ನೀವು ಒಟ್ಟು 1,124/- ರೂ. 16 ಪೈಸೆ ಬೆಲೆ ಬಾಳುವ ಒಟ್ಟು, 2,880 ಮಿ.ಲೀ. ಮದ್ಯ ಇರುವ 90 ಎಂ.ಎಲ್.ನ 32 ಹೈವಾರ್ಡ್ಸ್ ಚಿಯರ್ ವಿಸ್ಕಿ ಪೌಚ್‌ಗಳನ್ನು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ತಮ್ಮ ಅಕ್ರಮ ಸ್ವಾಧೀನದಲ್ಲಿ ಇಟ್ಟುಕೊಂಡಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯಿದೆ ಕಲಂ. 32(1) ರಡಿಯಲ್ಲಿ ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಈ ಮೂಲಕ ಆಪಾದಿಸುತ್ತೇನೆ.

ಕೊನೆಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ವೇಳೆಯಲ್ಲಿ ಆರೋಪಿತರಾದ ನೀವು ಅಕ್ರಮವಾಗಿ 90 ಎಂ.ಎಲ್.ನ 32 ಹೈವಾರ್ಡ್ಸ್ ಚಿಯರ್ ವಿಸ್ಕಿ ಪೌಚ್‌ಗಳ ಮದ್ಯವನ್ನು ಇಟ್ಟುಕೊಂಡು ಯಾವುದೇ ತೆರನಾದ ಪರವಾನಗಿಯಿಲ್ಲದೆ ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿರುತ್ತೀರಿ, ಆದ್ದರಿಂದ ಅಬಕಾರಿ ಕಾಯಿದೆ ಕಲಂ.34 ರಡಿಯಲ್ಲಿ ದಂಡನೀಯ

ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಈ ಮೂಲಕ ಆಪಾದಿಸುತ್ತೇನೆ.

ಪ್ರಶ್ನೆ.1- ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ : ತಿಳಿಯಿತು

ಪ್ರಶ್ನೆ.2- ನೀವು ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರೋ?

ಉತ್ತರಃ- ಒಪ್ಪಿದ್ದೇನೆ

(ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿಃ28.05.2024 ರಂದು ದೃಢೀಕರಿಸಿದ್ದೇನೆ.)

1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ನಂಜನಗೂಡು